ಮೈಸೂರ ಗೆಜೆಟ್.

ನಂ. 44.] ಸರ್ಕಾರದಿಂದ ಪ್ರಾಯಿಪ್ ಆದ್ದು. [ನಂ. 47.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 2, ಸ್ಟ 1909.

II ನೆ ಬಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್ ಡಿಪಾರ್ಟ್‌ಮೆಂಟ್.

ಇಸ್ತಿಹಾರ್‌ನಾಮೆ.

ನಂ. 317, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ತುಮಕೂರು ಡಿಸ್ಟ್ರಿಕ್ಟ್ ಶಿರಾ ತಾಲ್ಲೂಕಿನ 228 ಸರಕಾರಿ ಗ್ರಾಮಗಳ ರಿವಿಜ್ಡ್ ಸರ್ವೆ ಸೆಟ್ಲ್‌ಮೆಂಟ್ ಆಕಾರದ ದರಗಳನ್ನು ಪ್ರಸಿದ್ಧಪಡಿಸುವಿಕೆಯು ಕಸಬಾ ಶಿರಾ ವೊಕ್ಕ್ಯಾಂನಲ್ಲಿ ಬರುವ ತಿಂಗಳ (ಡಿಸೆಂಬರ್ 1909) 10ನೆ ಶುಕ್ರವಾರ ಅಥವಾ ಆ ಪುಮ್ಮೊರಿನಲ್ಲಿ ಪ್ರಾರಂಭಿಸಲ್ಪಡುವದು.

ನಂ. 323, ತಾರೀಖು 20ನೆ ನವಂಬರು 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟ್ ಪಾವಗಡ ತಾಲ್ಲೂಕಿನ 140 ಸರಕಾರಿ ಗ್ರಾಮಗಳ ರಿವಿಜ್ಡ್ ಸರ್ವೆ ಸೆಟ್ಲ್‌ಮೆಂಟ್ ಆಕಾರದ ದರಗಳನ್ನು ಪ್ರಸಿದ್ಧಪಡಿಸುವಿಕೆಯು ಕಸಬಾ ಪಾವಗಡದ ವೊಕ್ಕ್ಯಾಂನಲ್ಲಿ ಬರುವ ತಿಂಗಳ (ಡಿಸೆಂಬರ್ 1909) 6ನೆ ತಾರೀಖು ಸೋಮವಾರ ಅಥವಾ ಆ ಪುಮ್ಮೊರಿನಲ್ಲಿ ಪ್ರಾರಂಭಿಸಲ್ಪಡುವದು.

ಡಿ. ಶ್ಯಾಮರಾವ್,
ಸೂಪರ್‌ಟೆಂಡೆಂಟ್, ಮೈಸೂರು ರೆವಿನ್ಯೂ ಸರ್ವೆ ಮತ್ತು ಸೆಟ್ಲ್‌ಮೆಂಟ್.

ಅಮೃತಮಹಲ್ ಇಲಾಖೆ.

ನೋಟಿಫಿಕೇಷನ್.

ಕ್ಯಾಂಪ್ ಮೈಸೂರು, ತಾರೀಖು 14ನೆ ನವಂಬರು 1909.

ಅಮೃತಮಹಲ್ ಇಲಾಖೆ ಕೆಲವು ಗಂಡು ರಾಸುಗಳನ್ನು 6—12—1909ರ ಲಾಗಾಯಿತು ಮಾಗಡಿ ತಾಲ್ಲೂಕು "ಬಗನಗೆರೆ" ಕಾವಲಿನಲ್ಲಿಯು (ಅಂದರೆ ಕುಣಿಗಲ್-ಬೆಂಗಳೂರು ರಸ್ತೆಯ 38ನೆ ಮೈಲಿಯ ಸನಿಹಾಪ) ಮತ್ತು 12—12—09ರ ಲಾಗಾಯಿತು ಅರಕೀಕೆರೆ ತಾಲ್ಲೂಕು "ಗಂಡಸಿ" ಬಂಗ್ಲೆ ಬಳಿಯಲ್ಲಿಯೂ ಏಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟ ವುಳ್ಳವರು ಹಾಜರಾಗಿ ಛಡಸವಾಲಿನಲ್ಲಿ ರಾಸುಗಳನ್ನು ಪಡಿಯಬಹುದು.

ಹೆಚ್. ನಂಜುಂಡರಾಜೇ ಅರಸ್, ಸೂಪರ್‌ಟೆಂಡೆಂಟ್.